ಜನಸಂಪರ್ಕ ವಾರ್ಡ್ ಸಭೆ - 173

ದಿನಾಂಕ 21/05/2022

ಹಾಜರಿದ್ದ ಅಧಿಕಾರಿಗಳು

(T 7)

(1) Kariyappa
(2) Hemanth kumar K.
(3) K. Ramesh ASI Madivala Police Stn
(4) Jayarama Naik. R JE Bescom
(5) Naveen. S AE BWSSB
(6) Dr Rajani.
(7) Md. Shadab Haider Sr. H.I BBMP
(8) Mohan Govindiah NTC
9 Aravinda. R JHI
10 G. VIJAYKUMAR ASI TR. PS
11 C. Narasimhulu. Ward. 173 (BBMP Supervi)

ಹಾಜರಿದ್ದ ಸದಸ್ಯರುಗಳು

M. A. Poonnappa
Jyothi G. Prabhu
G. S. HOLLA
Sanjeev Kumar (BBMP. Supervi)

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ:21.05.2022 ರಂದು ಮೇ-2022 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಹೆಚ್.ಕೆ. ಸೋಮಶೇಖರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ. (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ:21.05.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಶ್ರೀ ಎಂ.ಎ. ಪೊನ್ನಪ್ಪ
2. ಶ್ರೀಮತಿ ಜ್ಯೋತಿ ಎಸ್. ಪ್ರಭು
3. ಶ್ರೀ ಜಿ.ಎಸ್. ಹೊಳ್ಳ
4. ಶ್ರೀ ಮೋಹನ್

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಹೆಚ್.ಕೆ. ಸೋಮಶೇಖರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ನೋಡಲ್ ಅಧಿಕಾರಿಗಳು
2. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
3. ಶ್ರೀ ಕರಿಯಪ್ಪ, ತೆರಿಗೆ ವಸೂಲಿಗಾರರು, ಕಂದಾಯ ವಿಭಾಗ
4. ಶ್ರೀ ರಮೇಶ್, ಎ.ಎಸ್.ಐ. ಮಡಿವಾಳ ಪೊಲೀಸ್ ಸ್ಟೇಷನ್
5. ಶ್ರೀ ಜಯರಾಮ ನಾಯಕ್ .ಕೆ, ಕಿರಿಯ ಅಭಿಯಂತರರು, ಬೆಸ್ಕಾಂ
6. ಶ್ರೀ ನವೀನ್ .ಎಸ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
7. ಶ್ರೀ ಮೊಹಮ್ಮದ್ ಶಾದಬ್ ಹೈದರ್, ಹಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ಅರವಿಂದ .ಆರ್, ಕಿರಿಯ ಆರೋಗ್ಯ ಪರಿವೀಕ್ಷಕರು
9. ಶ್ರೀ ಸಿ. ವಿಜಯಕುಮಾರ್, ಹೆಚ್.ಎಸ್.ಆರ್ ಸಂಚಾರ ಪೊಲೀಸ್ ಠಾಣೆ
10. ಶ್ರೀ ನರಸಿಂಹಯ್ಯ, ಬಿ.ಬಿ.ಎಂ.ಪಿ. ಸೂಪರ್‌ವೈಸರ್
11. ಶ್ರೀ ಸಂಜೀವಕುಮಾರ್, ಬಿ.ಬಿ.ಎಂ.ಪಿ. ಸೂಪರ್‌ವೈಸರ್

* * * * *

ಶ್ರೀ ಹೆಚ್.ಕೆ. ಸೋಮಶೇಖರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀಮತಿ ಜ್ಯೋತಿ ಎಸ್. ಪ್ರಭು ರವರು ಮಾತನಾಡಿ, ವಾಹನ ಸವಾರರಿಗೆ ರಸ್ತೆ ಉಬ್ಬು ಇರುವ ಸೂಚನೆಗಾಗಿ ಟೀಚರ್ಸ್ ಕಾಲೋನಿಯಲ್ಲಿನ ರಸ್ತೆಗಳಲ್ಲಿರುವ ರಸ್ತೆ ಉಬ್ಬುಗಳಿಗೆ ಪೈಂಟಿಂಗ್ ಮಾಡುವಂತೆ ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೋರಮಂಗಲ ಉಪವಿಭಾಗ



Scanned with CamScanner

ಶ್ರೀಮತಿ ಜ್ಯೋತಿ ಎಸ್. ಪ್ರಭು ರವರು ಮಾತನಾಡಿ, ಟೀಚರ್ಸ್ ಕಾಲೋನಿಯಲ್ಲಿ ಹಲವು ದಿನಗಳಿಂದ ಹದಗೆಟ್ಟಿರುವ ವಾಹನಗಳನ್ನು ರಸ್ತೆಬದಿಗಳಲ್ಲಿ ನಿಲ್ಲಿಸಿರುವುದು ಕಂಡುಬಂದಿರುತ್ತದೆ. ಆದುದರಿಂದ ರಸ್ತೆ ಬದಿಯಲ್ಲಿ ನಿಲ್ಲಿಸಿರುವ ಹದಗೆಟ್ಟಿರುವ ವಾಹನಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಆರಕ್ಷಕ ನಿರೀಕ್ಷಕರು,
ಮಡಿವಾಳ ಸಂಚಾರ ಪೊಲೀಸ್ ಠಾಣೆ

ಶ್ರೀ ಮೋಹನ್ ರವರು ಮಾತನಾಡಿ, ಟೀಚರ್ ಕಾಲೋನಿ ಸರ್ವೀಸ್ ರಸ್ತೆಯಲ್ಲಿರುವ ಮ್ಯಾಕ್ಸ್ ಮೋಟಾರ್ ಶೋ ರೂಂ ರವರು ತಮ್ಮ ಸಂಸ್ಥೆಯ ವಾಹನಗಳನ್ನು ಪಾದಚಾರಿ ಮಾರ್ಗದಲ್ಲಿ ನಿಲ್ಲಿಸುತ್ತಿರುತ್ತಾರೆ. ಇದರಿಂದ ಸಾರ್ವಜನಿಕರು ಪಾದಚಾರಿ ಮಾರ್ಗದಲ್ಲಿ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವಂತೆ ಹಾಗೂ ಇನ್ನು ಮುಂದೆ ವಾಹನಗಳನ್ನು ನಿಲ್ಲಿಸದಂತೆ ಶೋ ರೂಂನ ಮಾಲೀಕರಿಗೆ ಸೂಚನೆಯನ್ನು ನೀಡಬೇಕೆಂದು ಸಭೆಗೆ ತಿಳಿಸಿದರು.

ಕ್ರಮ: ಆರಕ್ಷಕ ನಿರೀಕ್ಷಕರು, ಮಡಿವಾಳ ಸಂಚಾರ ಪೊಲೀಸ್ ಠಾಣೆ
ಕ್ರಮ: ಸ.ಕಾ.ಪಾ.ಅ., ಕೋರಮಂಗಲ ಉಪವಿಭಾಗ

ಶ್ರೀ ಎಂ.ಎ. ಪೊನ್ನಪ್ಪ ರವರು ಮಾತನಾಡಿ, ಜಕ್ಕಸಂದ್ರದಲ್ಲಿರುವ ಇಂದಿರಾಕ್ಯಾಂಟೀನ್ ಹತ್ತಿರ, ಸ್ಮಶಾನದ ಹತ್ತಿರ, ಹ್ಸ್ ಗೇಟ್ ಹತ್ತಿರ, ಜಕ್ಕಸಂದ್ರ 3ನೇ ಮುಖ್ಯರಸ್ತೆ ಇಲ್ಲಿ ಬ್ಲಾಕ್‌ಸ್ಪಾಟ್‌ಗಳು ನಿರ್ಮಾಣವಾಗಿದ್ದು, ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಈ ಸ್ಥಳಗಳಲ್ಲಿರುವ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸುವಂತೆ ಹಾಗೂ ಆ ಸ್ಥಳಗಳಲ್ಲಿ ಮಾರ್ಷಲ್‌ಗಳನ್ನು ನೇಮಿಸುವುದು, ಕಸ ಎಸೆಯುವವರ ಸಾರ್ವಜನಿಕರಿಗೆ ದಂಡವನ್ನು ವಿಧಿಸಬೇಕೆಂದು ಸಭೆಗೆ ತಿಳಿಸಿದರು.

ಕ್ರಮ: ಆರೋಗ್ಯಾಧಿಕಾರಿಗಳು,
ಆರೋಗ್ಯ ಇಲಾಖೆ

ಶ್ರೀ ಎಂ.ಎ. ಪೊನ್ನಪ್ಪ ರವರು ಮಾತನಾಡಿ, ವಾರ್ಡ್‌ನ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಮಳೆಗಾಲದಲ್ಲಿ ಆಗುವ ಸಮಸ್ಯೆಗಳನ್ನು ನಿವಾರಿಸಲು ಹೆಚ್ಚು ಹೆಚ್ಚು ಸ್ವಯಂ ಸೇವಕರನ್ನು ನೇಮಿಸಬೇಕೆಂದು ತಿಳಿಸಿದರು.

ಶ್ರೀಮತಿ ಜ್ಯೋತಿ ಎಸ್. ಪ್ರಭು ರವರು ಮಾತನಾಡಿ, 13ನೇ ಮುಖ್ಯರಸ್ತೆಯಲ್ಲಿ ಮನು ಹೋಟೆಲ್ ಎದುರು ಇರುವ ಮ್ಯಾನ್‌ಹೋಲ್ ಕುಸಿದಿದ್ದು, ತಕ್ಷಣವೇ ತಳಹಂತದಿಂದ ಮರು ನಿರ್ಮಾಣಮಾಡಬೇಕೆಂದು ಸಭೆಯಲ್ಲಿ ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬಿ.ಡಬ್ಲ್ಯೂ.ಎಸ್.ಎಸ್.ಬಿ

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಶ್ರೀ ಪ್ರದೀಪ್ ಕುಮಾರ್ .ಆರ್) | 21/5/22<br>(ಶ್ರೀ ಹೆಚ್.ಕೆ. ಸೋಮಶೇಖರಪ್ಪ) |
| ಸದಸ್ಯ ಕಾರ್ಯದರ್ಶಿ | ನೋಡಲ್ ಅಧಿಕಾರಿಗಳು |
| ಹಾಗೂ ಸಹಾಯಕ ಅಭಿಯಂತರರು | ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು |
| ವಾರ್ಡ್-173 ಜಕ್ಕಸಂದ್ರ | ವಾರ್ಡ್-173 ಜಕ್ಕಸಂದ್ರ |



Scanned with CamScanner



Scanned with CamScanner



Scanned with CamScanner